O.S.No.377/2021
PW -1

ದಿನಾಂಕ 13/03/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು.

**ಪಾಟೀ ಸವಾಲು :- ಶ್ರೀ ಜಿ.ಎಸ್.ಎಸ್.ಆರ್. ಪ್ರತಿವಾದಿ ಪರ ವಕೀಲರಿಂದ**

ನನ್ನ ತಾಯಿ ಹೆಸರು ಅಲುವೇಲಮ್ಮ ಎಂದರೆ ಸರಿ. ನನ್ನ ತಾಯಿ ಮಾರ್ಚ 14 2023 ರಂದು ತೀರಿಕೊಂಡಿರುತ್ತಾರೆ. ಅಶ್ವಥಮ್ಮ ನನ್ನ ದೊಡ್ಡಮ್ಮ ಇರುತ್ತಾರೆ. ಅಶ್ವಥಮ್ಮ ನ ಗಂಡ ರಂಗಯ್ಯ ಇವರುಸಹಾಯಕ ನಿರ್ದೇಶಕರು ಎಂದು ಕೆಲಸ ಮಾಡುತ್ತಿದ್ದರು ಎಂದರೆ ಸರಿ. ದಾವಾ ಆಸ್ತಿಯನ್ನು ರಂಗಯ್ಯ ಇವರು ಸಂಪಾದಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ತಾತನ ಆಸ್ತಿ ಎಂದು ಉತ್ತರಿಸಿರುತ್ತಾರೆ. ಸದರಿ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿಯಲ್ಲಿ ನನಗೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಗುಂಡಗಲ್ ನಲ್ಲಿ ವಾಸ ಇರುತ್ತಾರೆ ಎಂದರೆ ಸರಿ. ಸದರಿ ಆಸ್ತಿಯನ್ನು ಪ್ರತಿವಾದಿ ನೋಡಿಕೊಳ್ಳುತ್ತಾ ಇರುತ್ತಾರೆ ಎಂದರೆ ಸಾಕ್ಷಿ ನಾವು ನೋಡಿಕೊಳ್ಳುತ್ತಿದ್ದೇವೆ ಎಂದು ಉತ್ತರಿಸಿರುತ್ತಾರೆ. ದಾವಾ ಆಸ್ತಿಗಳಲ್ಲಿನ ಮರಗಳನ್ನು ಪ್ರತಿವಾದಿ ಬೆಳೆಸಿರುತ್ತಾರೆ ಎಂದರೆ ಸಾಕ್ಷಿ ನಾವು ಬೆಳೆಸಿರುತ್ತೇವೆ ಎಂದು ಉತ್ತರಿಸಿರುತ್ತಾರೆ.

2. ದಾವಾಆಸ್ತಿಯ ಖಾತೆ ಪಹಣಿ ಪ್ರತಿವಾದಿ ಹೆಸರಿನಲ್ಲಿ ಇರುತ್ತವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ಮಾಡಿಸಿಕೊಂಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಖಾತೆ ಪಹಣಿ ಪ್ರಶ್ನಿಸಿ ಉಪ-ವಿಭಾಗಾಧಿಕಾರಿಗಳ ಮುಂದೆ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದರೆ ಸರಿ. ನಾವು ಜಂಟಿ ಕುಟುಂಬದಲ್ಲಿ ವಾಸ ಇದ್ದು ನಮ್ಮ ತಂದೆ ತೀರಿಕೊಂಡ ನಂತರ ನಮ್ಮನ್ನು ಬಿಟ್ಟು ಹೋಗಿರುತ್ತಾರೆಂದು ಉತ್ತರಿಸಿರುತ್ತಾರೆ. ಸಾಕ್ಷಿ ಮುಂದುವರೆದು ನಿವೃತ್ತಿ ಹಣ ಬಂದ ನಂತರ ನಮ್ಮನ್ನು ಬಿಟ್ಟು ಹೋಗಿರುತ್ತಾರೆಂದು ಉತ್ತರಿಸಿರುತ್ತಾರೆ. ನಮ್ಮ ಊರಿನಲ್ಲಿ ಪಂಚಾಯಿತಿ ಮಾಡಿರುತ್ತೇವೆ. ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

(ರಘುನಾಥ ಗೌಡ ಕೆ.ಟಿ.)
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ.